ಮಾತು-ಕತೆ

# ‘ಬಹುತ್ವ ಪ್ರತಿಪಾದಿಸುವ ರಂಗಭೂಮಿ ಮಹತ್ವದ್ದು

ಕನ್ನಡದ  ಪ್ರಮುಖ ರಂಗನಿರ್ದೇಶಕ ನಟರಾಜ್ ಹೊನ್ನವಳ್ಳಿ 60ಕ್ಕೂ ಹೆಚ್ಚು ನಾಟಕಗಳ ನಿರ್ದೇಶಕ. ಪಿ. ಲಂಕೇಶ್, ಚಂದ್ರಶೇಖರ ಕಂಬಾರ, ಕೆ.ಪಿ. ಪೂರ್ಣಚಂದ್ರ ತೇಜಸ್ವಿ, ಯು.ಆರ್. ಅನಂತಮೂರ್ತಿ, ದೇವನೂರ ಮಹಾದೇವ ಸೇರಿದಂತೆ ಹಲವು ಸಾಹಿತಿಗಳ ಪ್ರಮುಖ ಕೃತಿಗಳನ್ನು ರಂಗರೂಪಕ್ಕೆ ತಂದಿದ್ದಾರೆ. ‘ಗುಣಮುಖ’, ‘ಬಿರುಕು’, ‘ಇಬ್ಸನ್‌ನ ಜತೆಯ ಶತ್ರು’, ‘ಸಾಂಬಶಿವ ಪ್ರಹಸನ’, ‘ಮುಂದಣ ಕಥನ’, ‘ಮುದುಕನ ಮದುವೆ’, ‘ಜಾತ್ರೆ’, ‘ಸೇವಂತಿ ಪ್ರಸಂಗ’, ‘ತುಘಲಕ್’, ‘ಹಿಟ್ಟಿನ ಹುಂಜ’, ‘ಶೇಕ್‌ಸ್ಪಿಯರ್ ಮನೆಗೆ ಬಂದ’, ‘ಹ್ಯಾಮ್ಲೆಟ್’, ‘ಸಾಯೋ ಆಟ’, ‘ಜುಗಾರಿ ಕ್ರಾಸ್’, ‘ಔರಂಗಜೇಬ್’, ‘ನಟ ನಾರಾಯಣಿ’ ಅವರು ನಿರ್ದೇಶಿಸಿದ ಪ್ರಮುಖ ನಾಟಕಗಳು. ಕತೆ, ಕಾವ್ಯ, ಕಾದಂಬರಿಗಳನ್ನು ರಂಗ ರೂಪಕ್ಕೆ ಸಮರ್ಥವಾಗಿ ಒಗ್ಗಿಸುವುದು ನಟರಾಜ್ ಅವರ ನಿರ್ದೇಶನದ ವಿಶಿಷ್ಟ ಅಂಶ. ಪಠ್ಯದಿಂದ ತಮ್ಮದೇ ಆದ ರಂಗರೂಪವನ್ನು ಕಟ್ಟುವ ಕಲೆಗಾರಿಕೆ ಅವರದು. ಬ್ರೆಕ್ಟ್, ಚೆಕಾವ್ ಸೇರಿದಂತೆ ಪ್ರಸಿದ್ಧ ಅಂತರರಾಷ್ಟ್ರೀಯ ನಾಟಕರಾರರ ನಾಟಕಗಳನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ. ಈ ಅಪರೂಪಕದ ರಂಗತಜ್ಞನನ್ನು ಮಯೂರಕ್ಕಾಗಿ ಸಂದರ್ಶಿಸಿದ್ದಾರೆ **ಡಿ.ಎಂ. ಕುರ್ಕೆ ಪ್ರಶಾಂತ್.**



ಚಿತ್ರಗಳು: ಚಂದನ್ ಎಸ್.